# ಶ್ರೀಮಾತೆಯವರ ಕೃಪೆ

ಮೂಲ ಬಂಗಾಳಿ : **ಮನೋರಂಜನ ಚೌಧುರಿ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಇಂದು ೧೯೬೧ರ ವೈಶಾಖ ನೇ ದಿವಸ. ಇಂದಿಗೆ ೬೦ ವರ್ಷಗಳ ಹಿಂದೆ ನಡೆದ ಕಥೆಯಿದು. ಶಾಲೆಗೆ ರಜೆಯಿತ್ತು. ಹೊತ್ತು ಕಳೆಯುವುದಕ್ಕಾಗಿ ನಾನು ನನ್ನ ಸ್ನೇಹಿತನ ಮನೆಗೆ ಹೋಗಿದ್ದೆ. ಅದಕ್ಕೆ ಸ್ವಲ್ಪ ಮೊದಲಷ್ಟೇ (೧೯೦೨ರಲ್ಲಿ) ಸ್ವಾಮೀಜಿ ದೇಹತ್ಯಾಗ ಮಾಡಿದ್ದರು. ನನ್ನ ಸ್ನೇಹಿತ ಒಂದು ಪುಸ್ತಕವನ್ನು ನನ್ನ ಕೈಗೆ ಬಲವಂತವಾಗಿ ಕೊಟ್ಟಿದ್ದ. ಅದೇನೆಂದು ಓದಿದೆ, '**ಶ್ರೀಶ್ರೀರಾಮಕೃಷ್ಣ ಕಥಾಮೃತ**', ಶ್ರೀ 'ಮ'ರಚಿತ' ಎಂದಿತ್ತು. (ಕನ್ನಡದಲ್ಲಿ ಇದು 'ಶ್ರೀರಾಮಕೃಷ್ಣ ವಚನವೇದ' ವೆಂದು ಪ್ರಸಿದ್ಧವಾಗಿದೆ). ಅದರ ಮೊದಲ ಭಾಗ. ಒಂದೇ ಉಸಿರಿನಲ್ಲಿ ಪುಸ್ತಕವನ್ನು ಓದಿ ಮುಗಿಸಿ, ನನ್ನ ಸ್ನೇಹಿತನಿಗೆ ಅದನ್ನು ಹಿಂದಿರುಗಿಸುತ್ತ ಹೇಳಿದೆ, ''ಅದ್ಭುತ ಪುಸ್ತಕ!'' ನಾನು ನೋಖಾಲಿ ಜಿಲ್ಲೆಯ(ಈಗಿನ ಬಾಂಗ್ಲಾದೇಶದಲ್ಲಿದೆ) ನೋಖಾಲಾ ಗ್ರಾಮದಲ್ಲಿದ್ದ ನನ್ನ ಮನೆಗೆ ಮರಳಿದೆ. ಬಳಿಕ ನಾನು ತಿಂದುಂಡು, ತಿರುಗಾಡುತ್ತ, ಓದು ಬರಹ ಎಲ್ಲ ಮಾಡುತ್ತ ಇರತೊಡಗಿದೆ. ಹೀಗೆಯೇ ತುಂಬ ಕಾಲ ಕಳೆದು ಹೋಯಿತು. ಅಷ್ಟರಲ್ಲಿ ನನ್ನ ವಿವಾಹವಾಗಿ ಹೋಯಿತು. ನನಗೆ ಉದ್ಯೋಗವೂ ದೊರಕಿತು. ಮೊದಲಿಗೆ ಚಟ್ಟಗ್ರಾಮ, ಅನಂತರ ಕಾಕ್ಸ್‌ಬಜಾರ್‌ಗಳಲ್ಲಿ ಉದ್ಯೋಗದ ನಿಮಿತ್ತ ವಾಸಮಾಡಬೇಕಾಯಿತು. ಎರಡನೇ ಪ್ರದೇಶದಲ್ಲಿ ರಾತ್ರಿಯೆಲ್ಲ ಜಪ-ಧ್ಯಾನ ಮಾಡುತ್ತಿದ್ದೆ. ನಿರ್ಜನವಾದ ಸಮುದ್ರತೀರದಲ್ಲಿ ಅಥವಾ ನಿಶ್ಶಬ್ದವಾದ ಬೆಟ್ಟ ಪ್ರದೇಶದ ಬುಡದಲ್ಲಿ ನಾನು ಸುತ್ತಾಡುತ್ತಿದ್ದೆ. ರಾತ್ರಿ ಹೊತ್ತು ಮನೆಗೆ ಮರಳಿ, ಊಟ ಮಾಡಿ ಮಲಗಿಬಿಡುತ್ತಿದ್ದೆ. ನಾನು ಕನಸಿನಲ್ಲಿ ಹಲವು ಮಂದಿ ಸಾಧು-ಸಂನ್ಯಾಸಿಗಳನ್ನು ನೋಡುತ್ತಿದ್ದೆ. ಒಂದು ದಿನ ಕನಸಿನಲ್ಲಿ ಕಂಡೆ: ಸಮುದ್ರತೀರದಲ್ಲಿ ನಾನು ಬಹಳ ತನ್ಮಯನಾಗಿದ್ದೆ. ಸ್ವಲ್ಪ ಹೊತ್ತಿನ ನಂತರ ನಾಲ್ಕೂ ಕಡೆ ಬೆಳಕು ತುಂಬಿಕೊಂಡಿತು; ಮಧ್ಯೆ ಶ್ರೀರಾಮಕೃಷ್ಣರ ರೂಪದಲ್ಲಿ ಶ್ರೀಮನ್ನಾರಾಯಣನನ್ನು ಕಂಡೆ. ನಾಲ್ಕೂ ಕಡೆಗಳಲ್ಲಿ ಋಷಿಮುನಿಗಳು ಅವರನ್ನು ಸ್ತುತಿಸುತ್ತಿದ್ದರು. ಅಷ್ಟರಲ್ಲಿ ನನ್ನನ್ನು ಊಟಕ್ಕೆ ಕರೆದರು. ಆದರೆ ನಾನು ಹೇಗೆ ಹೋಗಲಿ? ನನ್ನ ಕಾಲುಗಳೇ ಕಾಣಿಸುತ್ತಿಲ್ಲ. ಕೊನೆಗೂ ಅಲ್ಲಲ್ಲಿ ಚಿವುಟಿಕೊಂಡು, ಒತ್ತಿಕೊಂಡು ಕಾಲುಗಳು ಸಿಕ್ಕವು.

ಇನ್ನಷ್ಟು ದಿನಗಳು ಕಳೆದುಹೋದವು. ಆಫೀಸಿನ ಕೆಲಸಗಳನ್ನು ಬೇಗನೆ ಮುಗಿಸಿ, ಯಾವಾಗ ಬೆಟ್ಟಕ್ಕೆ ಅಥವಾ ಸಮುದ್ರತೀರಕ್ಕೆ ಹೋದೇನು — ಎಂಬುದೇ ಆಲೋಚನೆ ನನ್ನದು. ನಾನು ಕಾಳೀಮಾತೆಯ ಭಕ್ತನಾಗಿದ್ದೆ. ಎಂದು ಅವಳನ್ನು ಕಾಣಬಲ್ಲೆ, ಅವಳ ದರ್ಶನ ಪಡೆಯಬಲ್ಲೆ ಎಂಬ ಭಾವನೆ ನನ್ನ ಮನಸ್ಸನ್ನು ವ್ಯಾಕುಲಗೊಳಿಸುತ್ತಿತ್ತು. ಅವಳ ಸ್ಮರಣ, ಮನನಗಳಲ್ಲಿ ಎಂಥ ಆನಂದವಿತ್ತು! ಮನಸ್ಸಿನಲ್ಲಿ ಈ ಆನಂದ ತುಂಬಲಾರದೇನೋ ಎನ್ನುವಂತಿತ್ತು. ಆಗಾಗ ಕಣ್ಣುಗಳಲ್ಲಿ ಅಶ್ರುಧಾರೆ ಇಳಿಯುತ್ತಿತ್ತು; ಅದಕ್ಕೆ ತಡೆಯೇ ಇರಲಿಲ್ಲ.



ನಾನು ಭಾವಿಸಿದೆ, ನೀರಿನಲ್ಲಿ ಪ್ರಾಣ ಹೋದರೆ? ಆಗ ಮಾತೆ ದರ್ಶನ ನೀಡುವಳು! ನಿರ್ಜನ ಪ್ರದೇಶದಲ್ಲಿ ವ್ಯಾಕುಲತೆಯಿಂದ ಅತ್ತರೆ ಮಾತ್ರ ಮಾತೆಯನ್ನು ಕಾಣಬಹುದು. ಅವಳು ದಯೆ ತೋರುವಳು. ಅಂದರೆ, ನನಗೆ ವ್ಯಾಕುಲತೆಯಿಲ್ಲವೆಂದು ತಿಳಿಯಲೆ? ನನಗೆ ಅಳುವುದಕ್ಕೆ ಬರುವುದಿಲ್ಲವೆ? ಅಳುವುದನ್ನೇ ನಾನು ಕಲಿತಿಲ್ಲವೆ? ನನ್ನ ಜೀವನ ವ್ಯರ್ಥವೆಂದು ನನಗೆ ಅನ್ನಿಸತೊಡಗಿತು.

ಒಂದು ದಿನ ನಾನು ಕಲ್ಕತ್ತೆಗೆ ಬಂದೆ. ಬಳಿಕ ದಕ್ಷಿಣೇಶ್ವರ ಮೂಲಕ ಬೇಲೂರು ಮಠವನ್ನು ತಲುಪಿದೆ. ಬೇಲೂರು ಮಠದಲ್ಲಿ ಸ್ವಾಮೀಜಿಯವರ ಶಿಷ್ಯ ಜ್ಞಾನ್ ಮಹಾರಾಜ್ (ಬ್ರಹ್ಮಚಾರಿ ಜ್ಞಾನ್) ಭೇಟಿಯಾದೆ. ಅವರು ಕೇಳಿದರು, ''ಧ್ಯಾನ ಮಾಡುತ್ತೀಯಾ?'' ನಾನೆಂದೆ, ''ಹೌದು, ಮಹಾರಾಜ್''. ಸ್ವಾಮೀಜಿಯವರ ಮಂದಿರದ ಬಳಿ ಬಿಲ್ವವೃಕ್ಷವನ್ನು ನನಗೆ ತೋರಿಸಿಕೊಟ್ಟರು. ನಾನು ಆ ಮರದ ಕಟ್ಟೆಯ ಮೇಲೆ ಕುಳಿತೆ. ಸ್ವಲ್ಪ ಹೊತ್ತು ಅಲ್ಲಿ ಧ್ಯಾನ ಮಾಡಿ, ಎದ್ದು ಬಂದೆ. ಜ್ಞಾನ್ ಮಹಾರಾಜ್ ನನ್ನನ್ನು ಕರೆದುಕೊಂಡು ಹೋಗಿ ಬೇಲೂರು ಮಠವನ್ನೆಲ್ಲ ಸುತ್ತಾಡಿಸಿ, ಎಲ್ಲವನ್ನೂ ತೋರಿಸಿಕೊಟ್ಟರು. ಮರುದಿನ ಬೆಳಿಗ್ಗೆ ಮತ್ತೆ ನಾನು ಬೇಲೂರು ಮಠಕ್ಕೆ ಹೋದೆ. ಜ್ಞಾನ್ ಮಹಾರಾಜ್ ಹೇಳಿದರು, ''ಮಾಸ್ಟರ್ ಮಹಾಶಯರ ಪರಿಚಯವಾಗಿದೆಯೆ?'' ನಾನೆಂದೆ ''ಇಲ್ಲ, ಮಹಾರಾಜ್.'' ಒಬ್ಬ ಯುವಕ ಬ್ರಹ್ಮಚಾರಿ ನೌಕೆಯ ಮೂಲಕ ಕಲ್ಕತ್ತೆಗೆ ಹೊರಟಿದ್ದರು. ಜ್ಞಾನ್ ಮಹಾರಾಜ್ ಅವರನ್ನು ಕರೆದು, ''ನಿನ್ನೊಂದಿಗೆ ಇವನನ್ನು ಕರೆದುಕೊಂಡು ಹೋಗು. ಮಾಸ್ಟರ್ ಮಹಾಶಯರ ಮನೆಯನ್ನು ತೋರಿಸಿಕೊಡು'' ಎಂದರು. ನೌಕೆಯನ್ನೇರಿ ಕುಳಿತೆವು. ಬಳಿಕ ನಾವು ಬಾಗ್‌ಬಜಾರಿನಲ್ಲಿ ನೌಕೆಯಿಂದ ಇಳಿದೆವು; ಬ್ರಹ್ಮಚಾರಿಗಳು ನನ್ನನ್ನು ಮಾಸ್ಟರ್ ಮಹಾಶಯರ ಮನೆಗೆ ಕರೆದುಕೊಂಡು ಹೋದರು. ಅವರ ಬಳಿಗೆ ಹೋದಾಗ ನಾನು ಭಯಭಕ್ತಿಯಿಂದ ಅವರ ಪಾದಗಳ ಬಳಿ ಕುಳಿತೆ. ಒಂದು ಸಣ್ಣ ಮಂಚದ ಮೇಲೆ ಶ್ರೀ'ಮ' ಅವರು ಮುಸ್ಲಿಮರು ನಮಾಜ್ ಮಾಡಲು ಕುಳಿತುಕೊಳ್ಳುವ ಹಾಗೆ ಕುಳಿತಿದ್ದರು. ನಮ್ಮ ವಿಚಾರವನ್ನೆಲ್ಲ ಕೇಳಿ ತಿಳಿದ ನಂತರ ಅವರು ಹೇಳಿದರು. ''ನಾನು ದಿವ್ಯದೃಷ್ಟಿಯಿಂದ ನೋಡುತ್ತಿದ್ದೇನೆ, ಶ್ರೀಮಾತೆ ನಿನ್ನನ್ನು ಕರೆಯುತ್ತಿದ್ದಾಳೆ.'' ಅವರು ಬಹಳ ಕಡಿಮೆ ಮಾತನಾಡಿದರು. ಆದರೆ ಯಾವಾಗಲೂ ಸುಪ್ರಸನ್ನರಾಗಿದ್ದರು. ಅವರು ಆಗಾಗ ನನ್ನತ್ತ ನೋಡುತ್ತಿದ್ದರು; ಹಾಗೂ ಅರ್ಧನಗೆಯಿಂದ ಕೂಡಿದ್ದರು. ''ಶ್ರೀಮಾತೆ ಜಯರಾಮಬಾಟಿಯಲ್ಲಿದ್ದಾರೆ'' ಎಂದರು. ಅಲ್ಲಿಗೆ ಹೋಗುವುದು ಹೇಗೆ ಎಂಬುದನ್ನು ಅವರೇ ತಿಳಿಸಿಕೊಟ್ಟರು.

ಮರುದಿನ ಬೆಳಿಗ್ಗೆ ನಾನು ರೈಲಿನ ಮೂಲಕ ವಿಷ್ಣುಪುರಕ್ಕೆ ಹೋದೆ. ರೈಲಿನಿಂದ ಇಳಿದು, ಹೋಟೆಲಿನಲ್ಲಿ ಭಾತ್ ತಿಂದು, ಸುರೇಶ್ವರ ಸೇನರ ಮನೆಗೆ ಹೋದೆ. ಮನೆಯನ್ನು ಪ್ರವೇಶಿಸುತ್ತಿದ್ದಾಗ ನೋಡಿದೆ, ಸುರೇಶ್ವರ ಬಾಬು ಮಲ್ಲಿಗೆ ಹೂವಿನ ತೋಟದಲ್ಲಿ ಅಗೆಯುತ್ತಿದ್ದರು. ನಾನು ಶ್ರೀಮಾತೆಯವರ ಬಳಿಗೆ ಹೋಗುತ್ತಿದ್ದೇನೆ ಎಂಬುದನ್ನು ಕೇಳಿದ ಅವರು ಅತ್ಯಂತ ಆದರದಿಂದ ನನಗೆ ರಾತ್ರಿಹೊತ್ತು ಊಟ ಮಾಡಿಸಿದರು. ರಾತ್ರಿ ಹತ್ತುಗಂಟೆಯ ಹೊತ್ತಿಗೆ ಅವರು ಎತ್ತಿನ ಗಾಡಿಯ ವ್ಯವಸ್ಥೆ ಮಾಡಿಕೊಟ್ಟರು. ರಾತ್ರಿಯಿಡೀ ಗಾಡಿ ಚಲಿಸಿತು. ಬೆಳಿಗ್ಗೆ ಏಳು ಗಂಟೆಯ ಸುಮಾರಿಗೆ ಕೋಯಲ್‌ಪಾರಾ ಆಶ್ರಮ ತಲುಪಿದೆ. ಅಲ್ಲಿ ನಾನು ಸ್ನಾನ, ತಿಂಡಿ ಎಲ್ಲವನ್ನು ಮಾಡಿ ಮುಗಿಸಿದೆ. ಅಲ್ಲಿ ಬ್ರಹ್ಮಚಾರಿಗಳು ತುಂಬಾ ಕಾಳಜಿ ವಹಿಸಿ ನೋಡಿಕೊಂಡರು. ಅಲ್ಲಿ ಊಟ ಮಾಡಿದ ನಂತರ ಜಯರಾಮಬಾಟಿಯತ್ತ ಹೊರಟೆ. ಸಂಜೆಯಾಗುವಷ್ಟರಲ್ಲಿ ನಾನು ಜಯರಾಮಬಾಟಿಯನ್ನು ತಲುಪಿದೆ. ಹಜಾರದಲ್ಲಿ ಶ್ರೀಮಾತೆಯವರನ್ನು ಕಂಡಕೂಡಲೇ ನಾನು ಅವರ ಪಾದಗಳ ಬಳಿ ಬಿದ್ದು ನಮಸ್ಕರಿಸಿದೆ. ಕಣ್ಣುಗಳಲ್ಲಿ ಒಂದೇ ಸಮನೆ ನೀರಿಳಿಯತೊಡಗಿದವು. ಆ ಅವಸ್ಥೆಯಲ್ಲಿ ನಾನು ''ಬ್ರಹ್ಮಮಯಿ, ಬ್ರಹ್ಮಮಯಿ, ಕೃಪೆ... ಕೃಪೆ!'' ಎನ್ನುತ್ತ, ಅವರ ಪಾದಗಳಲ್ಲಿ ಕಣ್ಣೀರಿನ ಹೊಳೆ ಹರಿಸಿದೆ. ಅವರು ನನ್ನ ತಲೆ ಸವರುತ್ತ ''ನಿಜಕ್ಕೂ ನೀನು ಕೃಪೆಗೆ ಪಾತ್ರನು!'' ಎಂದರು. ಶ್ರೀಮಾತೆ ನನಗೆ ಕಡಲೆಪುರಿ, ಕರಿದ ಬದನೆಕಾಯಿ, ಜಿಲೇಬಿ ಇವನ್ನೆಲ್ಲ ತಿನ್ನಲು ಕೊಟ್ಟರು. ಅಷ್ಟರಲ್ಲಿ ಕತ್ತಲಾಯಿತು.

ಆನಂದ! ಎಂಥ ಆನಂದವದು! ಆನಂದದ ಸಂತೆಯೇ ಅಲ್ಲಿ ನೆರೆದಿದ್ದಂತೆ ಅನ್ನಿಸಿತು. ನೀರಿನಲ್ಲಿ ಮೀನುಗಳು ಆನಂದದಿಂದ ಈಜಾಡುತ್ತಿರುವ ಹಾಗೆ ನನಗೂ ಆನಂದದ ಸಾಗರದಲ್ಲಿ ಈಜಾಡಬೇಕು ಅನ್ನಿಸಿತು. ಎತ್ತ ನೋಡಿದರೂ ಅಲ್ಲೆಲ್ಲ ಆನಂದವೆ! ಕಾಮಾಲೆ ಕಣ್ಣಿನವನಿಗೆ ಯಾವ ಕಡೆ ನೋಡಿದರೂ ಹಳದಿಯಾಗಿ ಕಾಣುವಂತಾಗಿತ್ತು ನನ್ನ ಅವಸ್ಥೆ. ಶ್ರೀಮಾತೆಯವರ ಮಾತಿನಲ್ಲಿ ಹೇಳುವುದಾಗಿದ್ದರೆ, ನಾಲ್ಕೂ ಕಡೆ 'ಆನಂದದ ಘಟ ಪೂರ್ಣವಾಗಿತ್ತು.' ∩ ನನಗೂ ನಾಲ್ಕು ಕಡೆ ಆನಂದಮಯವಾಗಿ ಕಾಣಿಸಿತು. ರಾತ್ರಿ ಹೊತ್ತು ಹೊಟ್ಟೆ ತುಂಬಾ ಊಟ ಮಾಡಿ, ಮಲಗಿ ನಿದ್ರಿಸಿದೆ. ಬೆಳಿಗ್ಗೆ ತುಂಬ ಬೇಗನೆ ಎದ್ದು, ಪ್ರಾತಃಕೃತ್ಯಗಳನ್ನು ಮುಗಿಸಿ, ಕೈಕಾಲು ಮುಖ ತೊಳೆಯುವುದಕ್ಕಾಗಿ ಕೋಣೆಯಿಂದ ಹೊರಬಂದೆ. ಅಷ್ಟರಲ್ಲೇ ಶ್ರೀಮಾತೆಯವರ ಜಪ-ಧ್ಯಾನಗಳೆಲ್ಲ ಮುಗಿದಿರಬೇಕು. ಅನಂತರ ನಾನು ಕೇಳಿಸಿಕೊಂಡೆ, ಶ್ರೀಮಾತೆ ಒಬ್ಬ ಬ್ರಹ್ಮಚಾರಿಗೆ ಹೇಳುತ್ತಿದ್ದರು: ''ಚಟ್ಟಗ್ರಾಮದಿಂದ ನಿನ್ನೆ ಸಂಜೆ ಬಂದಿದ್ದ ಆ ಹುಡುಗನನ್ನು ನಿದ್ದೆಯಿಂದ ಎಬ್ಬಿಸಿಬಿಡು.'' ಕೋಣೆಯಲ್ಲಿ ನಾನು ಇಲ್ಲದ್ದನ್ನು ಕಂಡು ಬ್ರಹ್ಮಚಾರಿ ಶ್ರೀಮಾತೆಗೆ, ''ಅಲ್ಲಂತೂ ಯಾರೂ ಇಲ್ಲ'' ಎಂದರು. ಆಗ ಶ್ರೀಮಾತೆ, ''ಮತ್ತೆ ಹೋಗಿ ನೋಡು. ನಾನು ಅವನಿಗಾಗಿ ಕಾಯುತ್ತಿದ್ದೇನೆ'' ಎಂದರು. ಇತ್ತ ನಾನು ಮನಬಂದಂತೆ ಅಲ್ಲಲ್ಲಿ ತಿರುಗಾಡುತ್ತ ನೇರ ಭಾನು ಪಿಸಿ (ಭಾನು ಅತ್ತೆ) ಯವರ ಮನೆಗೆ ಬಂದುಬಿಟ್ಟಿದ್ದೆ. ಭಾನು ಪಿಸಿ ಹಾಲಿನ ಲೋಟವನ್ನು ಚಮಚದಿಂದ ಕೆರೆಯುತ್ತ ನಿಂತಿದ್ದರು. ಹಾಲಿನ ಕೆನೆಯಿಂದ ಒಂದಿಷ್ಟು ಚನಾ ತಯಾರಿಸಿಬಿಟ್ಟಿದ್ದರು. ನಾನು ಅಲ್ಲಿಗೆ ಹೋದ ಕೂಡಲೇ ಅವರು ಕೇಳಿದರು, ''ಗೋಪಾಲ, ಚನಾ ತಿನ್ನುತ್ತೀಯಾ?'' ಅಲ್ಲಿ ಮೊಣಕಾಲೂರಿ, ಕೈ ನೀಡಿ ಅದನ್ನು ಸ್ವೀಕರಿಸಿದ ನಾನು, ಆನಂದದಿಂದ ತಿನ್ನತೊಡಗಿದೆ. ಆಗ ಅವರು ಹೇಳಿದರು, ''ಎಂಥ ಪ್ರೇಮ ನಿನ್ನನ್ನೂ ಹಿಡಿದುಕೊಂಡು ಬಿಟ್ಟಿದೆ ಕಣೋ! ಹುಲಿ ಹಿಡಿದ ಹಾಗೆ''

∩ ತುಂಬಿದ ಘಟ ಅಥವಾ ಮಡಕೆ ಎಂದರೆ ಅದು ಶುಭಸೂಚಕ.

ತುಂಬ ತಿಳಿದವರು ಆಕೆ. ನನ್ನನ್ನು ನೋಡಿದ ಕೂಡಲೇ ನನ್ನ ಅವಸ್ಥೆ ಅವರಿಗೆ ಅರ್ಥವಾಗಿತ್ತು. ಅಷ್ಟರಲ್ಲಿ ಹರಿಪ್ರೇಮ ಮಹಾರಾಜ್(ಆಗ ಅವರು ಬ್ರಹ್ಮಚಾರಿಯಾಗಿದ್ದರು) ಅಲ್ಲಿಗೆ ಬಂದು, ''ನೀವು ಇಲ್ಲಿದ್ದೀರಾ? ಶ್ರೀಮಾತೆ ನಿಮಗಾಗಿ ಕಾಯುತ್ತಿದ್ದಾರೆ'' ಎಂದರು. ಕೈಯಲ್ಲಿದ್ದ ಚನಾವನ್ನು ಪೂರ್ಣವಾಗಿ ಬಾಯಲ್ಲಿ ತುಂಬಿಸಿಕೊಂಡು, ಅಲ್ಲಿಂದ ನಾನು ಓಡಿ ಹೋದೆ. ಅಲ್ಲಿಗೆ ಹೋಗಿ ನೋಡಿದೆ, ಶ್ರೀಮಾತೆ ನನಗಾಗಿ ಕಾಯುತ್ತಿದ್ದಾರೆ. ನಾನು ಹೋದ ಕೂಡಲೇ, ''ದೀಕ್ಷೆ ಪಡೆದುಕೊಳ್ಳುತ್ತೀಯಾ?'' ಎಂದು ಕೇಳಿದರು. ನಾನೆಂದೆ ''ಅಮ್ಮಾ, ನನಗೇನೂ ಗೊತ್ತಿಲ್ಲ. ಎಲ್ಲವೂ ನಿಮ್ಮ ಇಚ್ಛೆಯಿದ್ದ ಹಾಗಾಗಲಿ.'' ''ಹೋಗಿ ಸ್ನಾನ ಮಾಡಿ ಬಾ'' ಎಂದ ಶ್ರೀಮಾತೆ ತಮ್ಮ ಬಲಭಾಗದಲ್ಲಿದ್ದ, ತಮ್ಮ ಮನೆಯ ಪೂರ್ವಭಾಗದಲ್ಲಿದ್ದ ಕೊಳವನ್ನು ತೋರಿಸಿದರು. ಬೇಗನೆ ಕೊಳದಲ್ಲಿ ಮುಳುಗು ಹಾಕಿ, ಶ್ರೀಮಾತೆಯವರ ಮುಂದೆ ಹಾಜರಾದೆ. ಮಾಸ್ಟರ್ ಮಹಾಶಯರು ನನಗೆ ಹೇಳಿದ್ದರು, ''ಶ್ರೀಮಾತೆಯವರಿಗಾಗಿ ಒಂದು ತೆಳುವಾದ ಕೆಂಪಂಚಿನ ಸೀರೆ, ಒಂದು ರೂಪಾಯಿ ನಾಣ್ಯ, ಸ್ವಲ್ಪ ದಾಸವಾಳ ಹೂಗಳು — ಇವನ್ನು ತೆಗೆದುಕೊಂಡು ಹೋಗು'' ಎಂದು. ನಾನು ಇವನ್ನೆಲ್ಲ ಕೊಂಡೊಯ್ದಿದ್ದೆ. ಸ್ನಾನ ಮಾಡಿ ಬಂದ ನಾನು ಇವನ್ನೆಲ್ಲ ಶ್ರೀಮಾತೆಯವರಿಗೆ ನೀಡಿದೆ. ಶ್ರೀಮಾತೆ ನನಗೆ ಮಂತ್ರದೀಕ್ಷೆ ನೀಡಿದರು. ಸ್ವತಃ ತಮ್ಮ ಕೈ ಬೆರಳುಗಳಿಂದ ಜಪ ಮಾಡಿ ತೋರಿಸುತ್ತ, ಜಪ ಮಾಡುವುದನ್ನು ಕಲಿಸಿಕೊಟ್ಟರು. ಶ್ರೀರಾಮಕೃಷ್ಣರ ಭಾವಚಿತ್ರದ ಕಡೆಗೆ ತೋರಿಸಿ, ''ಅವರೇ ನಿನ್ನ ಇಷ್ಟದೇವತೆ'' ಎಂದರು. ದೀಕ್ಷೆಯಾದ ನಂತರ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಏಳುವಾಗ ನಾನು ಸ್ಪಷ್ಟವಾಗಿ ನೋಡಿದೆ, ಶ್ರೀಮಾತೆ ಅಲ್ಲಿರಲಿಲ್ಲ; ಅವರ ಜಾಗದಲ್ಲಿ ಸ್ವಯಂ ಕಾಳೀಮಾತೆಯೇ ಕುಳಿತಿದ್ದಾಳೆ! ನಾನು ಪ್ರಜ್ಞಾಹೀನನಾಗಿ ಮತ್ತೆ ಅವರ ಪಾದಗಳ ಬಳಿ ಉರುಳಿಬಿದ್ದೆ.

ನನ್ನ ನಂತರ ಇನ್ನು ಕೆಲವರಿಗೂ ದೀಕ್ಷೆಯಾಯಿತು. ಅವರು ಶ್ರೀಮಾತೆಯವರನ್ನು ಕೇಳಿದರು, ''ಅಮ್ಮಾ, ಅವನೇನು ಸಂನ್ಯಾಸಿಯಾಗಿ, ಸಂಸಾರ ಬಿಟ್ಟು ಹೊರಹೋಗುವನೆ?'' ಅದಕ್ಕೆ ಉತ್ತರವಾಗಿ ಶ್ರೀಮಾತೆ, ''ಇಲ್ಲ, ಅವನಿಗೆ ಇನ್ನೂ ಸ್ವಲ್ಪ ಪ್ರಾಪಂಚಿಕ ಭೋಗ ಉಳಿದಿದೆ'' ಎಂದರು.

ಆನಂದ, ಆನಂದ.. ಎಂಥ ಆನಂದ! ಅಂದು ರಾತ್ರಿ ಕೂಡ ನನಗೆ ತಾಯಿಯ ಮನೆಯಲ್ಲಿ ತಂಗುವ ಸೌಭಾಗ್ಯ ಲಭಿಸಿತು. ಮರುದಿನ ಬೆಳಿಗ್ಗೆ ಖೋಕಾ ಮಹಾರಾಜ್(ಸ್ವಾಮಿ ಸುಬೋಧಾನಂದಜಿ ಮಹಾರಾಜ್) ಕಾಮಾರಪುಕುರಕ್ಕೆ ಹೋಗುವವರಿದ್ದರು. ನಾನು ಶ್ರೀಮಾತೆಯವರಿಗೆ ಹೇಳಿದೆ, ''ಖೋಕಾ ಮಹಾರಾಜರೊಂದಿಗೆ ಹೋಗಲೆ?'' ಶ್ರೀಮಾತೆ ಅನುಮತಿ ನೀಡಿದರು. ಅಂತೆಯೇ ನಾನು ಮಹಾರಾಜರೊಂದಿಗೆ ಕಾಮಾರಪುಕುರಕ್ಕೆ ಹೊರಟೆ. ಕಾಮಾರಪುಕುರದಲ್ಲಿ ರಾಮಲಾಲ ದಾದಾ ಹಾಗೂ ಲಕ್ಷ್ಮೀದೀದಿಯವರನ್ನು ಭೇಟಿಯಾದೆ. ಅಲ್ಲಿ ಊಟ ಮಾಡಿ, ರಾಮಲಾಲ ದಾದಾ ಅವರ ಬಳಿ ಶ್ರೀರಾಮಕೃಷ್ಣರನ್ನು ಹಾಗೂ ಶ್ರೀಮಾತೆಯವರನ್ನು ಕುರಿತ ಕೆಲವು ಕಥೆಗಳನ್ನು ಕೇಳಿ, ಮತ್ತೆ ಜಯರಾಮಬಾಟಿಗೆ ಮರಳಿದೆ. ಇಲ್ಲಿ ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ: ಮುಂದೆ ಭುವನೇಶ್ವರದ ರಾಮಕೃಷ್ಣ ಮಠದಲ್ಲಿ ರಾಜಾ ಮಹಾರಾಜರ(ಸ್ವಾಮಿ ಬ್ರಹ್ಮಾನಂದಜಿ ಮಹಾರಾಜ್) ದರ್ಶನ ಹಾಗೂ ಸಾನ್ನಿಧ್ಯ ಲಾಭವನ್ನು ಹೊಂದುವ ಭಾಗ್ಯ ನನ್ನದಾಯಿತು.

ಮತ್ತೆ ಹಿಂದಿನಂತೆಯೇ ನನ್ನ ಜೀವನ ಮುಂದುವರಿಯಿತು. ಬಹಳ ಸಮಯದ ನಂತರ ನಾನು 'ಅಮೃತ ಬಜಾರ್' ಪತ್ರಿಕೆಯಲ್ಲಿ ಓದಿದೆ, ಶ್ರೀಮಾತೆಯವರು ದೇಹತ್ಯಾಗ ಮಾಡಿದ್ದಾರೆ ಎಂಬುದಾಗಿ. ನಾನು ಹನ್ನೊಂದು ದಿನಗಳ ಕಾಲ ಸೂತಕವನ್ನು ಪಾಲಿಸಿದೆ. ಹನ್ನೆರಡನೇ ದಿನ ಪ್ರಾತಃಕಾಲದಲ್ಲಿ ನಾನು ಒಬ್ಬ ಬ್ರಾಹ್ಮಣನಿಗೆ ಊಟದ ಬಟ್ಟಲು, ತಟ್ಟೆ, ಕಲಶ ಇತ್ಯಾದಿಗಳನ್ನೆಲ್ಲ ದಾನ ನೀಡಿದೆ. ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡಿ, ಎಲ್ಲರಿಗೂ ಪ್ರಸಾದ ವಿತರಣೆ ಮಾಡಿದೆ. ಅವರೇನೂ ನನ್ನ ಸಾಕುತಾಯಿಯಲ್ಲ, ನಿಜವಾದ ತಾಯಿ! ಜನ್ಮಜನ್ಮಾಂತರದ ತಾಯಿ! ಅದಕ್ಕಾಗಿಯೇ ನಾನು ಇವನ್ನೆಲ್ಲ ಆಚರಿಸಬೇಕಾಯಿತು.

ಅದಾದ ಮೇಲೆ ಎಷ್ಟೋ ವರ್ಷಗಳು ಕಳೆದಿವೆ. ಇಂದು ನಾನು ನೋಡುತ್ತೇನೆ — ಶ್ರೀಮಾತೆ ತೀರಿಕೊಂಡು, ದೇಹಧಾರಿಯಾಗಿ ಇಲ್ಲದಿದ್ದರೂ, ಅವರು ನನ್ನ ಬಳಿ, ನನ್ನ ಜೀವನದಲ್ಲಿ ಇನ್ನೂ ಪ್ರತಿ ದಿನ ಜೀವಂತವಾಗಿದ್ದಾರೆ.[೨]

---

೨ 'ಉದ್ಬೋಧನ', ಸಂಪುಟ ೯೫, ಸಂಖ್ಯೆ ೭. ಮನೋರಂಜನ ಚೌಧುರಿಯವರ ಅಳಿಯ ಪರಿತೋಷ್ ಮಜುಂದಾರ್ ಅವರು ಈ ಲೇಖನವನ್ನು ಬರಹ ರೂಪಕ್ಕಿಳಿಸಿದರು.

## ಶ್ರೀ ಶಾರದಾ ಸ್ತೋತ್ರ

ಪರಮಪ್ರಕೃತಿಯೆ, ಅಭಯ ಕೊಡುವವಳೆ, ಹೇ ವರದೆ,
ನರರೂಪಧರೆ, ಜನರ ತಾಪ ಕಳೆವವಳೆ,
ಶರಣುಬಂದಿಹ ಸೇವಕರಿಗೆ ತೋಷವನೀವ
ಎಲೆ ಜಗಜ್ಜನನಿ, ನಾ ನಮಿಸುವೆನು ನಿನಗೆ.

ಗುಣಹೀನರಾದ, ಅಪರಾಧಗಳ ಗೈದಿರುವ
ಮೋಹಗತ ಸುತರನುದ್ಧರಿಸು ದಯದಿ;
ಭವಸಾಗರವ ದಾಟಿಸುವ ದೋಣಿಯಂತಿರುವ
ಎಲೆ ಜಗಜ್ಜನನಿ, ನಮಿಸುವೆನು ನಿನಗೆ.

ವಿಷಯಕುಸುಮವನು ಪರಿಹರಿಸಿ, ಭವರೋಗವನು
ಕಳೆವ ಜನನಿಯ ಪಾದಕಮಲಾಮೃತ –
ಶಾಂತಿಸುಧೆಯನು, ಮನೋಭೃಂಗವೇ, ಸತತ ಕುಡಿ;
ಎಲೆ ಜಗಜ್ಜನನಿ, ನಮಿಸುವೆನು ನಿನಗೆ.

*(ಸ್ವಾಮಿ ಅಭೇದಾನಂದರ 'ಪ್ರಕೃತಿಂ ಪರಮಾಂ' ಸ್ತೋತ್ರದ ಮೊದಲ ಮೂರು ಶ್ಲೋಕಗಳು. ಅನು: ಡಾ. ಸಿ.ಪಿ.ಕೆ.)*